**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.64/2013

ಸಾಕ್ಷಿಯನ್ನು ದಿಃ **25.10.2025** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ 1ನೇ ಪ್ರತಿವಾದಿ ಪರ ಶ್ರೀ SS ವಕೀಲರಿಂದಃ-**

**ನಾನು ಈ ದಾವೆಯಲ್ಲಿ 1ನೇ ಪ್ರತಿವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳೆಲ್ಲ ಸತ್ಯವಾಗಿದ್ದು ಸಹಿ ಮಾಡಿದ್ದೇನೆ.**

ಪಾಟೀ ಸವಾಲುಃ ವಾದಿಯರ ಪರ ಶ್ರೀ **RS** ವಕೀಲರಿಂದಃ-

ನನ್ನ ತಂದೆ ಪೇಟಯ್ಯರವರ ತಂದೆಯ ಹೆಸರು ಚಿಕ್ಕಪುಟ್ಟೇಗೌಡ. ಚಿಕ್ಕಪುಟ್ಟೇಗೌಡರವರು ಮೂಲತಃ ಬೂದನೂರು ಗ್ರಾಮದವರು. ಪೇಟಯ್ಯರವರಿಗೆ ಯಾವಾಗ ಮದುವೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಈ ದಾವೆ ಸಲ್ಲಿಸಿದ ನಂತರ ಪೇಟಯ್ಯರವರಿಗೆ ಯಾವಾಗ ಮದುವೆಯಾಗಿದೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿದ್ದಿರಾ ಎಂದರೆ ಇಲ್ಲ. ಅವರ ಮದುವೆ ಮಂಡ್ಯದಲ್ಲಿ ಆಗಿರಬಹುದು. ಮದುವೆಯಾಗುವ ಕಾಲಕ್ಕೆ ಪೇಟಯ್ಯರವರು ಬೂದನೂರಿನಲ್ಲಿ ಇರಲಿಲ್ಲ ಮಂಡ್ಯದಲ್ಲಿದ್ದರು. ವಾದಿ ಈ ದಾವೆ ಸಲ್ಲಿಸಿದ ನಂತರ ಪೇಟಯ್ಯರವರು ಯಾವ ವರ್ಷದವರೆಗೆ ಬೂದನೂರಿನಲ್ಲಿ ವಾಸವಿದ್ದರು ಎಂದು ತಿಳಿದುಕೊಂಡಿದ್ದಿರಾ ಎಂದರೆ ಇಲ್ಲ. ಪೇಟಯ್ಯರವರಿಗೆ ಯಾವ ವರ್ಷದಲ್ಲಿ ಕೆಲಸ ಸಿಕ್ಕಿತು ಎಂದು ಹೇಳಲಾಗುತ್ತದೆಯೇ ಎಂದರೆ ಗೊತ್ತಿಲ್ಲ. ಪೇಟಯ್ಯರವರು ಕೆಲಸಕ್ಕೆ ಸೇರಿದಾಗ ಅವರಿಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ಗೊತ್ತಿಲ್ಲ.

3ನೇ ಪ್ರತಿವಾದಿ ಯಾವ ವರ್ಷದಲ್ಲಿ ಜನಿಸಿದ್ದಾರೆ ಎಂದು ಗೊತ್ತಿಲ್ಲ. ಅವರು SSLC ಓದಿದ್ದಾರೆ. 2ನೇ ಪ್ರತಿವಾದಿ ಯಾವಾಗ ಜನಿಸಿದ್ದಾರೆ ಎಂದು ಗೊತ್ತಿಲ್ಲ. 2ನೇ ಪ್ರತಿವಾದಿ MBBS ಓದಿದ್ದಾರೆ. ಅವರಿಗೆ ಮದುವೆಯಾಗಿಲ್ಲ. ಬಿ.ಪಿ ಮಹೇಂದ್ರ ವಾದಿಯ ಗಂಡ. 13ನೇ ಪ್ರತಿವಾದಿ ನನ್ನ ಅಣ್ಣನ ಮತ್ತು ವಾದಿಯ ಮಗಳು. ವಾದಿಯ ಗಂಡನನ್ನು ಪೇಟಯ್ಯರವರೇ ಓದಿಸಿದ್ದಾರೆ ಎಂದರೆ ಸರಿ. ವಾದಿಯ ಗಂಡ ಇಂಜಿನಿಯರಿಂಗ್ ಪದವಿ ಹೊಂದಿದ್ದರು ಎಂದರೆ ಸರಿ. 4ನೇ ಪ್ರತಿವಾದಿಗೆ ವೈದ್ಯಕೀಯ ಶಿಕ್ಷಣವನ್ನು ಪೇಟಯ್ಯರವರೇ

ಕೊಡಿಸಿದ್ದಾರೆ. ನಾನು Mechanical Engineering ಓದಿದ್ದೇನೆ. ನನಗೆ ಕೂಡ ನನ್ನ ತಂದೆ ಪೇಟಯ್ಯರವರೇ ವಿದ್ಯಾಭ್ಯಾಸ ಕೊಡಿಸಿದ್ದಾರೆ. ನನಗೆ ಹಾಗೂ ನನ್ನ ಸಹೋದರರು ಸಹೋದರಿಯರಿಗೆ ವಿದ್ಯಾಭ್ಯಾಸ ಕೊಡಿಸಲು ನನ್ನ ತಂದೆಗೆ ಸಾಕಷ್ಟು ಸಂಬಳ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಂಬಳದ ಜೊತೆ ಬೋನಸ್ ಕೂಡ ಬರುತಿತ್ತು. ನನ್ನ ಮತ್ತು ನನ್ನ ಸಹೋದರರು ಸಹೋದರಿಯರ ವಿದ್ಯಾಭ್ಯಾಸ ಮುಗಿಯುವವರೆಗೆ ನನ್ನ ತಂದೆಗೆ ಎಷ್ಟು ಸಂಬಳ ಬರುತ್ತಿತ್ತು ಎಂಬ ಬಗ್ಗೆ ದಾಖಲೆ ಇಲ್ಲ. ಎಲ್ಲಾ ಮಕ್ಕಳಿಗೂ ಕೂಡ ನನ್ನ ತಂದೆ ಪೇಟಯ್ಯರವರೇ ಮದುವೆ ಮಾಡಿಸಿದ್ದಾರೆ.

ನನ್ನ ತಂದೆಗೆ ಸಂಬಳದ ಜೊತೆಗೆ ಬೂದನೂರಿನಲ್ಲಿ ಇದ್ದ ಪಿತ್ರಾರ್ಜಿತ ಆಸ್ತಿಯಿಂದ ವರಮಾನ ಬರುತ್ತಿದ್ದು, ಅದರಿಂದ ನಮಗೆಲ್ಲಾ ವಿದ್ಯಾಭ್ಯಾಸ ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಗಂಡ 1969–70ನೇ ಸಾಲಿನಲ್ಲಿ ಅಮೇರಿಕಕ್ಕೆ ಹೋಗಿರಬಹುದು. 4ನೇ ಪ್ರತಿವಾದಿ 1971ರಲ್ಲಿ ಐರ್ಯ್ಲ್ಯಾಂಡ್‌ಗೆ ಹೋಗಿ ಅಲ್ಲಿಂದ ಅಮೇರಿಕಕ್ಕೆ ಹೋಗಿದ್ದಾರೆ. ವಾದಿಯ ಗಂಡ ಮತ್ತು 4ನೇ ಪ್ರತಿವಾದಿಗೆ ಮದುವೆಯಾಗುವ ಮೊದಲೇ ಒಳ್ಳೆಯ ಸಂಬಳ ಬರುತ್ತಿತ್ತು ಎಂದರೆ ಗೊತ್ತಿಲ್ಲ. ವಾದಿಯ ಗಂಡ ಮತ್ತು 4ನೇ ಪ್ರತಿವಾದಿಗೆ ಮದುವೆಯಾಗುವ ಮೊದಲು ಅವರು ಅಮೇರಿಕಾದಲ್ಲಿ ಮತ್ತು ಐರ್ಯ್ಲ್ಯಾಂಡ್ ಇದ್ದಾಗ ನಮ್ಮ ತಂದೆ ಪೇಟಯ್ಯ ಬದುಕಿದ್ದರು. ತಂದೆ ಬದುಕಿದ್ದಾಗಲೇ ವಾದಿಯ ಗಂಡ ಮತ್ತು 4ನೇ ಪ್ರತಿವಾದಿಗೆ ಮದುವೆ ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆ ತೀರಿಹೋಗುವವರೆಗೆ ವಾದಿಯ ಗಂಡ, ನನ್ನ ಮತ್ತು 4ನೇ ಪ್ರತಿವಾದಿಯ ಮಧ್ಯೆ ಯಾವುದೇ ತಂಟೆ ತಕರಾರು ಇರಲಿಲ್ಲ. ನನ್ನ ತಂದೆ ತೀರಿಹೋಗುವವರೆಗೆ ನಮ್ಮ ಕುಟುಂಬದ ಕರ್ತರಾಗಿ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ವಾದಿಯ ಗಂಡ ಮತ್ತು 4ನೇ ಪ್ರತಿವಾದಿ ತಮಗೆ ಬರುತ್ತಿದ್ದ ವರಮಾನವನ್ನು ತಂದೆಗೆ ಕಳುಹಿಸಿಕೊಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಪೇಟಯ್ಯ 1995–96ರಲ್ಲಿ ತೀರಿಹೋಗಿರಬಹುದು. 1971ರಲ್ಲಿ ನನ್ನ ತಾಯಿ ಹೊಂಬಾಳಮ್ಮ ತೀರಿಹೋಗಿದ್ದಾರೆ. 1995ಕ್ಕೂ ಮೊದಲು ನನ್ನ ತಂದೆಯ ಎಲ್ಲಾ ಮಕ್ಕಳಿಗೂ ಮದುವೆಯಾಗಿತ್ತು ಎಂದರೆ ಸರಿ.

ನಾನು 1970 ಮಾರ್ಚ್ ನಲ್ಲಿ B.E Mechanical Engineering ಪೂರ್ಣಗೊಳಿಸಿದ್ದೇನೆ. ನೀವು ಮೊದಲು ಎಲ್ಲಿ ಕೆಲಸಕ್ಕೆ ಸೇರಿದ್ದಿರಿ ಎಂದರೆ ನಾನು ಕೆಲಸಕ್ಕೆ ಸೇರುವ ಯೋಚನೆಯಲ್ಲಿ ಇರಲಿಲ್ಲ. ನಾನು ಫ್ಯಾಕ್ಟರಿಯಲ್ಲಾಗಲೀ ಗ್ಯಾರೇಜಿನಲ್ಲಾಗಲೀ ಕೆಲಸದ ಬಗ್ಗೆ ತರಬೇತಿ ಪಡೆದಿದ್ದೇನೆ. 1971ರಲ್ಲಿ ತರಬೇತಿ ಪಡೆದಿದ್ದೇನೆ. ನಾನು 1971–

72ನೇ ಸಾಲಿನಲ್ಲಿ ಸ್ವಂತ ಉದ್ದಿಮೆಯನ್ನು ಪ್ರಾರಂಭಿಸಿದ್ದೇನೆ. ನೀವು ಉದ್ದಿಮೆ ಪ್ರಾರಂಭಿಸುವಾಗ ನಿಮ್ಮ ಬಳಿ ಏನು ಸಂಪಾದನೆ ಇತ್ತು ಎಂದರೆ ನನಗೆ ಬೇಕಾದವರು ಒಂದು ಖಾಲಿ ಸೈಟನ್ನು ಲೀಜ್‌ಗೆ ಕೊಟ್ಟಿದ್ದರು. ಅವರ ಹೆಸರು ನಮ್ಮಮನೆಯ ಪಕ್ಕದವರಾದ ಲಾಯರ್ ಲಿಂಗದೇವರು. ಸದರಿ ಸೈಟನ್ನು ಬಾಡಿಗೆಗಾಗಿ ಕೊಟ್ಟರು. ನಂತರ ನಾನು ಸರಕಾರದಿಂದ ಇಂಜಿನಿಯರ್ ಪಧವಿದರನಿಗೆ ಶೇ.4ರ ಬಡ್ಡಿದರದಲ್ಲಿ ಕೊಡುವ ರೂ. 25,000/- ವನ್ನು ಪಡೆದುಕೊಂಡಿದ್ದೇನೆ. ಲೀಜ್ ಗೆ ಸೈಟ್ ಪಡೆದುಕೊಂಡ ಬಗ್ಗೆ ದಾಖಲೆ ಇದೆಯೆ ಎಂದರೆ ಇತ್ತು ಈಗ ಲಭ್ಯವಿಲ್ಲ. ಲೀಜ್ ಹಣವನ್ನು ಯಾವ ಆದಾಯದ ಮೂಲದಿಂದ ಕೊಟ್ಟಿದ್ದಿರಿ ಎಂದರೆ ನಾನು ಲೀಜ್ ಗೆ ಪಡೆದುಕೊಂಡ 2-3 ತಿಂಗಳಿನಲ್ಲಿಯೇ ಸರಕಾರದಿಂದ ಹಣ ಬಂದ ಕಾರಣ ಆ ಹಣವನ್ನು ಕೊಟ್ಟು ಸದರಿ ಸೈಟನ್ನು ನಾನೇ ಖರೀದಿ ಮಾಡಿದೆ. ಹಣ ಕೊಟ್ಟ ಬಗ್ಗೆ ಮತ್ತು ಸೈಟನ್ನು ಖರೀದಿಸಿದ ಬಗ್ಗೆ ದಾಖಲೆ ಹಾಜರುಪಡಿಸಿದ್ದಿರ ಎಂದರೆ ದಾಖಲೆ ಇದೆ ಆದರೆ ಹಾಜರುಪಡಿಸಲಾಗಿದೇ ಇಲ್ಲವೇ ಗೊತ್ತಿಲ್ಲ. ನನಗೆ ಸರ್ಕಾರದಿಂದ 2 ಇಂಡಸ್ಟ್ರೀಯಲ್ ಸೈಟ್ ಗಳು ಹಂಚಿಕೆಯಾಗಿದೆ. C-3 ಎಂಬ ಸೈಟ್ 1975ರಲ್ಲಿ ನನಗೆ ಹಂಚಿಕೆಯಾಗಿರಬಹುದು. ಪೂರ್ವ-ಪಶ್ಚಿಮ 30 ಮೀಟರ್ ಮತ್ತು ಉತ್ತರ-ದಕ್ಷಿಣ 50 ಮೀಟರ್ ಇರಬಹುದು. ಅದು ಈಗ ನನ್ನ ಹೆಸರಿನಲ್ಲಿದೆ. ಅದರ ಖಾತೆ ಕಂದಾಯ ನನ್ನ ಹೆಸರಿನಲ್ಲಿಯೇ ಬರುತ್ತಿದೆ. ಖಾತಾ Extract ಇದೆಯೇ ಎಂದರೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. C-3 ಹಂಚಿಕೆಯಾದ 3-4 ವರ್ಷಗಳ ನಂತರ D-15 ಎಂಬ ನಿವೇಶನ ಹಂಚಿಕೆಯಾಗಿರಬಹುದು. ಅದರ ವಿಸ್ತೀರ್ಣ ಪೂರ್ವ-ಪಶ್ಚಿಮ 30 ಮೀಟರ್ ಮತ್ತು ಉತ್ತರ-ದಕ್ಷಿಣ 15 ರಿಂದ 18 ಮೀಟರ್ ಇರಬಹುದು. ಸದರಿ ನಿವೇಶನ ನನ್ನ ಹೆಸರಿನಲ್ಲಿಯೇ ಇದ್ದು ಆ ಬಗ್ಗೆ ದಾಖಲೆ ಹಾಜರುಪಡಿಸಬಲ್ಲೆ. 1975 ರಿಂದ 2013ರವರೆಗೆ ಮೇಲೆ ಹೇಳಿದ ಎರಡೂ ನಿವೇಶನಗಳಲ್ಲಿ ನಾನೇ ಕೆಲಸ ಮಾಡುತ್ತಿದ್ದೆ. ನನಗೆ ಹಂಚಿಕೆಯಾದ ಎರಡು ನಿವೇಶನದ ಬಗ್ಗೆ ಸರ್ಕಾರಕ್ಕೆ ಎಷ್ಟು ಹಣ ಕಟ್ಟಿದ್ದಿರಿ ಎಂದರೆ Own your own shed ಎಂಬ scheme ನ ಅಡಿಯಲ್ಲಿ ನನಗೆ ನಿವೇಶನ ಹಂಚಿಕೆಯಾಗಿತ್ತು.

ದಾವಾ ಷೆಡ್ಯೂಲ್ ಐಟಂ ನಂ.1(ಎ) ಯಿಂದ (ಇ) ಸ್ವತ್ತುಗಳನ್ನು ನಾನು 1987-88 ನೇ ಸಾಲಿನಲ್ಲಿ ಖರೀದಿಸಿರಬಹುದು. ಸದರಿ ಸ್ವತ್ತುಗಳನ್ನು ಖರೀದಿಸಲು ನನ್ನ ಬಳಿ ಸ್ವಂತ ಸಂಪಾದನೆಯ ಹಣ ಇತ್ತು ಎಂದು ತೋರಿಸಲು ನನ್ನ ಬಳಿ ದಾಖಲೆ ಇದೆ. 1975 ರಿಂದ 87 ಅವಧಿಯಲ್ಲಿ ನೀವು ಆದಾಯ ತೆರಿಗೆ ಪಾವತಿಸಿದ ಬಗ್ಗೆ ದಾಖಲೆ

ಇದೆಯೆ ಎಂದರೆ ಆದಾಯದ ಮಿತಿಯನ್ನು ದಾಟಿದ ನಂತರ ಆದಾಯ ತೆರಿಗೆ ಪಾವತಿಸಿದ ಬಗ್ಗೆ ದಾಖಲೆ ಇದೆ. ದಾವಾ ಷೆಡ್ಯೂಲ್ ಐಟಂ ನಂ.1(ಎ) ಯಿಂದ (ಇ) ಸ್ವತ್ತುಗಳನ್ನು ಖರೀದಿಸಿದಬಗ್ಗೆ 1987ರ ನಂತರ ಆದಾಯ ತೆರಿಗೆ ರಿಟನ್ಸ್ ನಲ್ಲಿ ನಮೂದಿಸಿದ್ದಿರಾ ಎಂದರೆ ನಮೂದಿಸಿದ್ದೇನೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ದಾವಾ ಷೆಡ್ಯೂಲ್ ಐಟಂ ನಂ.2ನ್ನು ನಾನೇ ಖರೀದಿಸಿದ್ದೇನೆ. ದಾವಾ ಐಟಂ ನಂ. 2 ರಿಂದ 5, 8 ಮತ್ತು 9ನೇ ಆಸ್ತಿಗಳನ್ನು ಕುಟುಂಬದ ಇತರ ಸದಸ್ಯರ ಸಹಾಯವಿಲ್ಲದೇ ನನ್ನ ಸ್ವಂತ ಸಂಪಾದನೆಯಿಂದ ಖರೀದಿಸಿದ್ದೇನೆ ಎಂದು ತೋರಿಸಲು ದಾಖಲೆ ಇದೆ. ಮೇಲೆ ಹೇಳಿದ ಎಲ್ಲಾ ಸ್ವತ್ತುಗಳ ಕ್ರಯ ಪತ್ರಗಳು, ಗ್ರ್ಯಾಂಟ್ ಸರ್ಟಿಫಿಕೇಟ್ ಗಳು ಮತ್ತು ಉಳಿದ ಎಲ್ಲಾ ದಾಖಲೆಗಳು ನನ್ನ ಬಳಿ ಇವೆ.

ವಾದಿಯ ಗಂಡ 1997-98ನೇ ಸಾಲಿನಲ್ಲಿ ತೀರಿಹೋಗಿರಬಹುದು. ವಾದಿಯ ಗಂಡ ಬದುಕಿದ್ದಾಗ ಅವರು ಮತ್ತು 4ನೇ ಪ್ರತಿವಾದಿ ನನ್ನ ಜೊತೆ ಮಾಡಿದಂತಹ ಎಲ್ಲಾ ವ್ಯವಹಾರಗಳ ಮೂಲ ದಾಖಲೆಗಳು ನಿಮ್ಮ ಬಳಿ ಇವೆಯೇ ಎಂದರೆ ಅವೆಲ್ಲಾ ಸುಳ್ಳು ಯಾವುದು ಇಲ್ಲ. ನನ್ನ ಮಗನ ಹೆಸರು ಮನ್ವಂತ್. ಅವರು BBM ಓದಿದ್ದಾರೆ. ವಾದಿ ಹಾಗೂ ಅವರ ಗಂಡ ಇದ್ದ ಮತ್ತು 4ನೇ ಪ್ರತಿವಾದಿ ಇದ್ದ ಅಮೇರಿಕಾದ ಮನೆಗಳಿಗೆ ನನ್ನ ಮಗ ಹೋಗಿಲ್ಲ. ನೀವು ಮೊಬೈಲ್ ಫೋನ್ ಯಾವಾಗ ಖರೀದಿಸಿದ್ದಿರಾ ಎಂದರೆ ಮೋಬೈಲ್ ಫೋನ್ ಚಾಲ್ತಿಗೆ ಬಂದ 4-5 ವರ್ಷದಲ್ಲಿ ಖರೀದಿಸಿರಬಹುದು. ನನ್ನ ಮಗ ಯಾವ ವರ್ಷದಲ್ಲಿ ಮೊಬೈಲ್ ಖರೀದಿಸಿದ್ದ ಎಂದು ಗೊತ್ತಿಲ್ಲ. ನನ್ನ ಬಳಿ ಇ-ಮೇಲ್ ಐಡಿ ಇಲ್ಲ. ಮಗನ ಬಳಿ ಇದೆಯೆ ಇಲ್ಲವೇ ಗೊತ್ತಿಲ್ಲ. ಹೊಂಬಾಳೆ ಜಿ-ಮೇಲ್ ಯಾರದ್ದು ಎಂದು ಗೊತ್ತಿಲ್ಲ. ವಾದಿಯ ಗಂಡನ ಮತ್ತು 4ನೇ ಪ್ರತಿವಾದಿಯ ಮೇಲ್ ಐಡಿ ಗೊತ್ತಿಲ್ಲ. State Bank of Mysore ಅವೆನ್ಯೂ ರಸ್ತೆ ಶಾಖೆ, ಬೆಂಗಳೂರಿನಲ್ಲಿ ನನ್ನದಾಗಲೀ ನನ್ನ ಕುಟುಂಬದ ಸದಸ್ಯರದ್ದಾಗಲೀ ಉಳಿತಾಯ ಖಾತೆ ಮತ್ತು ಕರೆಂಟ್ ಖಾತೆ ಇಲ್ಲ. ಕರೆಂಟ್ ಅಕೌಂಟ್ ನಂ. 761, State Bank of Mysore ಬ್ರಾಂಚ್ ಸಂಃ 294 ಇರುವುದು ನನ್ನ ಖಾತೆ ಎಂದರೆ ಸರಿಯಲ್ಲ. ದಿಃ 07.11.2002ರಂದು ವಾದಿಯ ಗಂಡ ಮೇಲೆ ಹೇಳಿದ ಕರೆಂಟ್ ಅಕೌಂಟ್ ನಂ. 761ಕ್ಕೆ ಆಸ್ತಿ ಖರೀದಿಸಲು ಮತ್ತು ಕುಟುಂಬ ನಿರ್ವಹಣೆಗಾಗಿ ರೂ.10,000/- ವನ್ನು ನನಗೆ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ಅದೇ ದಿನ ಅದೇ ಖಾತೆಗೆ ವಾದಿಯ ಗಂಡ ಪುನಃ ರೂ.10,000/-ವನ್ನುನನಗೆ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. SBM Mandya City ಶಾಖೆಯಲ್ಲಿ ನನ್ನ

ಉಳಿತಾಯ ಖಾತೆ ಇದೆ ಎಂದರೆ ಸರಿ. ವಾದಿ ಅಮೇರಿಕಾದ 5th 3rd ಬ್ಯಾಂಕ್ ನಲ್ಲಿರುವ ಖಾತೆ ಸಂಃ 7512551487 ರಿಂದ ರೂ.25,000/- ದಿಃ 10.06.2004ರಂದು ಮೇಲೆ ಹೇಳಿದ ನನ್ನ SBM Mandy ಶಾಖೆಗೆ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ವಾದಿ ಮೇಲೆ ಹೇಳಿದ ಬ್ಯಾಂಕ್ ನಿಂದ SBM Bengaluru ಖಾತೆಗೆ ದಿಃ 21.10.2004ರಂದು ರೂ.25,000/- ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ದಿಃ 20.02.2003ರಂದು ವಾದಿಯ ಗಂಡ SBM ಅವೆನ್ಯೂ ರಸ್ತೆ ಶಾಖೆಯಲ್ಲಿರುವ ನನ್ನ ಖಾತೆಗೆ ರೂ.60,000/ವನ್ನು ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಆಕೆಯ ಗಂಡ ನನ್ನ ಮೇಲೆ ಹೇಳಿದ ಖಾತೆಗಳಿಗೆ ಅನೇಕ ಬಾರಿ ಹಣ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. 1987 ರಿಂದ 2013ರವರೆಗೆ ನೀವು ಸಲ್ಲಿಸಿದ ಆದಾಯ ತೆರಿಗೆ ರಿನಸ್ಸ್ ನಲ್ಲಿ ಅಮೇರಿಕಾದಿಂದ ಮತ್ತು ಇಂಗ್ಲೇಂಡಿನಿಂದ ಎಷ್ಟು ಹಣ ಬಂದಿತ್ತು ಎಂಬ ಬಗ್ಗೆ ತೋರಿಸಿದ್ದಿರಾ ಎಂದರೆ ನನಗೆ ಅಲ್ಲಿಂದ ಯಾವುದೇ ಹಣ ಬಂದಿಲ್ಲ. ವಾದಿ ಮತ್ತು ಅವರ ಗಂಡನ ಖಾತೆಗಳಿಂದ ನನ್ನ ಖಾತೆಗೆ ಹಣ ಬಂದಿದೆಯೇ ಇಲ್ಲವೇ ಎಂಬ ಬಗ್ಗೆ ನ್ಯಾಯಾಲಯದ ಮೂಲಕ ದಾಖಲೆ ತರಿಸಿಕೊಳ್ಳಲು ನನ್ನ ಅಭ್ಯಂತರ ಇಲ್ಲ. ನನ್ನ ಬಳಿ SBM Mandya ಶಾಖೆ. SBM ಸಕ್ಕರೆ ನಗರ ಶಾಖೆ ಮತ್ತು SBM ಅವೆನ್ಯೂ ರಸ್ತೆಯ ಬೆಂಗಳೂರು ಶಾಖೆಗೆ ಸಂಬಂಧಿಸಿದ ಪಾಸ್ ಪುಸ್ತಕಗಳು ಇಲ್ಲ. ಈಗ SBM Bank SBI ನೊಂದಿಗೆ ವಿಲೀನಗೊಂಡಿದೆ ಎಂದರೆ ಸರಿ. ನಾನು ಐಟಿಆರ್ ಅನ್ನು ಮಂಡ್ಯದಲ್ಲಿ ಸಲ್ಲಿಸುತ್ತೇನೆ. ನನ್ನ ಆಧಾರ್ ಕಾರ್ಡ್ ಸಂಖ್ಯೆ ಮತ್ತು ಪಾನ್ ಐಡಿ ಸಂಖ್ಯೆ ಈಗ ಹೇಳಲು ಆಗುವುದಿಲ್ಲ. ದಾಖಲೆ ಇದೆ ಹಾಜರುಪಡಿಸುತ್ತೇನೆ. 1987 ರಿಂದ ಇಲ್ಲಿಯವರೆಗೆ ನಾನು ಸಲ್ಲಿಸಿದ ಐಟಿಆರ್ ದಾಖಲೆಗಳನ್ನು ಹಾಜರುಪಡಿಸಬಹುದು ಎಂದರೆ 3-4 ವರ್ಷದ ದಾಖಲೆಗಳನ್ನು ಹಾಜರುಪಡಿಸಬಹುದು.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು